<u>ದಿನಾಂಕಃ 12.12.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1(ಎ) ರಿಂದ (ಸಿ) ಮತ್ತು 2 ರ ಪರ ವಕೀಲರಾದ ಶ್ರೀ.ಇ.ಎನ್ ವಕೀಲರಿಂದ</u>

ನಾನು ನಮ್ಮ ಮನೆಯ ಖರ್ಚು ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ. ನಮ್ಮ ಮನೆಗೆ ಬೇಕಾದ ಸಂತೆಯನ್ನು ನಾನೇ ಮಾಡುತ್ತೇನೆ ಎಂದರೆ ಸರಿ. ನಮ್ಮ ಮನೆಯಲ್ಲಿ 4 ಮತ್ತು 5 ನೇ ಪ್ರತಿವಾದಿ ಹಾಗೂ ನನ್ನ ಹೆಂಡತಿ ನೇತ್ರಾವತಿ ಹಾಗೂ ನಾನು ವಾಸವಾಗಿದ್ದೇವೆ. ಸಾಕ್ಷಿ ಮುಂದುವರೆದು ಸಮಾರಂಭ ಇದ್ದಲ್ಲಿ ನಮ್ಮ ಅಣ್ಣ ಸಂತೆ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಅಣ್ಣ ಮತ್ತು ನನ್ನ ಮನೆ ಬೇರೆ ಬೇರೆ ಆಗಿದ್ದು, ಅಡುಗೆ ಮನೆ ಬೆರೆ ಬೆರೆ ಆಗಿದ್ದು 18 ರಿಂದ 20 ವರ್ಷಗಳ ಹಿಂದಿನಿಂದ. ನನ್ನ ಹೆಸರಿಗೆ ಖಾತೆ ಇರುವ ಜಮೀನಿನ ಮೇಲೆ ನಾನೇ ಸಾಲವನ್ನು ತೆಗೆದಿರುತ್ತೇನೆ. ಸದರಿ ಸಾಲವನ್ನು ನಮ್ಮ ಮನೆಗೆ ಬಳಸುತ್ತಿದ್ದೇನೆ. ಸಾಲದ ಮರುಪಾವತಿಯನ್ನು ನಾನೇ ಮಾಡುತ್ತೇನೆ. ನಾನು ಈ ರೀತಿ ಸಾಲವನ್ನು ತೆಗೆದು ಹಾಗೂ ತೀರಿಸುವುದು ಮಾಡುತ್ತಾ 15 ರಿಂದ 20 ವರ್ಷಗಳು ಸಂದಿರುತ್ತದೆ. ನಮ್ಮ ಅಣ್ಣನ ಹೆಸರಿನ ಮೇಲಿರುವ ಜಮೀನಿನ ಮೇಲೆ ನಮ್ಮ ಅಣ್ಣನೇ ಸಾಲ ತೆಗೆದು ಸಾಲ ತೀರಿಸುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನೂ ತೀರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಅಣ್ಣನ ಸಾಲವನ್ನು ನಾನು ಪಾವತಿಮಾಡಿದ್ದೇನೆ ಎಂದು ಹೇಳಿದ ಬಗ್ಗೆ ದಾಖಲಾತಿ ಇರುವುದಿಲ್ಲ.

ದಾವ ಸ್ವತ್ತು 2 ರ ಸರ್ವೆ ನಂಬರ್ 29 ರಲ್ಲಿ 15 ಗುಂಟೆಯನ್ನು ನಮ್ಮ ಗ್ರಾಮದ ಸೈದೂರು ಮನೆ ಬಸವರಾಜ ಬಿನ್ ಕನ್ನಾನಾಯ್ಕ ರವರಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡು 50 ಸಾವಿರ ರೂ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಕಾಲದಲ್ಲಿ ನಾನು, ನನ್ನ ಅಣ್ಣ 2 ನೇ ಪ್ರತಿವಾದಿ ಬೇರೆ ಬೇರೆ ವಾಸಮಾಡಲು ಪ್ರಾರಂಭಿಸಿರುತ್ತೇವೆ. 2000 ನೇ ಇಸವಿಯಲ್ಲಿ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡ ಸ್ಮರಣಾರ್ಥ ಒಂದು ಜುಬಾನೆ ಹಿಸ್ಸೆ (ಮೆಮೊರಾಂಡಮ್ ಆಫ್ ಪಾರ್ಟಿಷನ್) ಅನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಅಕ್ಕಂದಿರ ಮದುವೆಯನ್ನು ನನ್ನ ತಂದೆ ಬದುಕಿದ್ದಾಗಲೇ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣನ ಮದುವೆ ನನ್ನ ತಂದೆ ಬದುಕಿದ್ದಾಗಲೇ ಆಗಿರುತ್ತದೆ ಎಂದರೆ ಸರಿ. ನಮ್ಮ ಅಕ್ಕಂದಿರ ಮದುವೆಯನ್ನು ವರೋಪಚಾರವನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಚಿಕ್ಕವನಿದ್ದೆ ಎಂದು ಉತ್ತರಿಸುತ್ತಾರೆ. ನನ್ನ ಅಣ್ಣನಿಗೆ ಜಾಸ್ತಿ ಆಸ್ತಿ ಹೋಗಿದ್ದು ನನಗೆ ಕಡಿಮೆ ಆಗಿದೆ ಎಂದು ನಾನು ಯಾವ ನ್ಯಾಯಾಲಯದಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಒಟ್ಟು

ಕುಟುಂಬದಲ್ಲೇ ಆಸ್ತಿ ಇನ್ನೂ ಇದೆ ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ಹಾಜರುಮಾಡಿರುವ ದಾಖಲೆಗಳಲ್ಲಿ 2 ನೇ ಪ್ರತಿವಾದಿ ಹಾಗೂ ನನ್ನ ಹೆಸರಿಗೆ ಬೇರೆ ಬೇರೆ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಬದುಕಿದ್ದಾಗಲೇ ನನಗೆ ಸ್ವಲ್ಪ ನನ್ನ ಅಣ್ಣನಿಗೆ ಸ್ವಲ್ಪ ಆಸ್ತಿ ಪಾಲು ಮಾಡಿಕೊಟ್ಟಿದ್ದರು ಹಾಗೂ ಉಳಿಕೆ ಆಸ್ತಿ ಇಂದಿಗೂ ನನ್ನ ತಂದೆ ತಾಯಿಯವರ ಹೆಸರಿನಲ್ಲೇ ಇದೆ. ದಿಃ01.02.2000 ನೇ ಇಸವಿಯಲ್ಲಿ ಒಂದು ಜುಬಾನೆ ಹಿಸ್ಸೆಯನ್ನು ನನ್ನ ತಂದೆ ಮಾಡಿದ್ದರು ಹಾಗೂ ಅದಕ್ಕೆ ನಾವು ಸಹಿ ಮಾಡಿದ್ದೆವು ಎಂದರೆ ಸರಿಯಲ್ಲ. ಶಿವಪ್ಪ ಹೆಚ್ , ಶ್ರೀಧರ ಕುಗ್ವೆ ನನಗೆ ಪರಿಚಯ ಇರುವುದಿಲ್ಲ ಶಿವಾನಂದ ಕುಗ್ವೆ ನಮ್ಮ ಗ್ರಾಮಸ್ಥರು. ಕೆ ನಾರಾಯಣಪ್ಪ ಆಗ ಇದ್ದರು, ಈಗ ಬದುಕಿರುವುದಿಲ್ಲ. ಕೆ ಹುಚ್ಚಪ್ಪ ಎನ್ನುವವರು 10 ರಿಂದ 12 ಜನ ನಮ್ಮ ಗ್ರಾಮದಲ್ಲಿ ಇದ್ದಾರೆ. ನಾನು ಈಗ ಹೇಳಿದ ಸಾಕ್ಷಿದಾರರ ಮುಂದೆಯೇ ಸದರಿ ಜುಬಾನೆ ಹಿಸ್ಸೆ ಆಗಿದ್ದು, ನಾನು ದುರ್ಲಾಬ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಣ್ಣನಿಗೆ 3 ಜನ ಗಂಡು ಮಕ್ಕಳು. ನನ್ನ ಅಣ್ಣನ 3 ಜನ ಗಂಡು ಮಕ್ಕಳು ಒಟ್ಟು ಕುಟುಂಬದಲ್ಲಿ ಇರುತ್ತಾರೆ. ಅವರು 3 ಜನರ ಮದುವೆ ಆಗಿರುತ್ತದೆ. ಸದರಿ 3 ಜನರ ಮದುವೆಯನ್ನು ನಮ್ಮ ಅಣ್ಣನೇ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೂ ಸೇರಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. 2000 ನೇ ಇಸವಿಗಿಂತ ಮುಂಚೆನೆ ಹಿಸ್ಸೆ ಆಗಿದ್ದು, ಹಿಸ್ಸೆ ಪ್ರಕಾರ ಅಣ್ಣನ ಆಸ್ತಿಯನ್ನು ಅಣ್ಣ ಹಾಗೂ ನನ್ನ ಆಸ್ತಿಯನ್ನು ನಾನು ಅನುಭವಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ